# ಬಂಜಾರ ಭಾಷೆಯ ಪದ ರಚನೆ

**ಕಾಳಮ್ಮ**

ಆನೇಕಲ್ಲು ತಾಂಡ, ಆನೇಕಲ್ಲು ಅಂಚೆ, ಹಗರಿಬೊಮ್ಮನಹಳ್ಳಿ ತಾಲೂಕು,
ವಿಜಯನಗರ.

**DOI: https://doi.org/10.5281/zenodo.18470600**

## ABSTRACT:

ಪ್ರಸ್ತುತ ಲೇಖನವು ಲಿಪಿರಹಿತ ಮತ್ತು ಸಮೃದ್ಧ ಜಾನಪದ ಹಿನ್ನೆಲೆಯುಳ್ಳ ಬಂಜಾರ (ಲಂಬಾಣಿ/ಗೋರ್‌ಬೋಲಿ) ಭಾಷೆಯ ಪದರಚನಾ ವೈಶಿಷ್ಟ್ಯಗಳನ್ನು ಕುರಿತು ವಿಶ್ಲೇಷಿಸುತ್ತದೆ. ಪ್ರಮುಖವಾಗಿ, ಚೈನೀಸ್ ಮತ್ತು ವಿಯೆಟ್ನಾಮಿ ಭಾಷೆಗಳಲ್ಲಿ ಕಂಡುಬರುವಂತೆ ಬಂಜಾರ ಭಾಷೆಯಲ್ಲೂ 'ಏಕಾಕ್ಷರ ಪದರಚನೆ' (Monosyl–labic word formation) ಇರುವುದನ್ನು ಲೇಖಕರು ಇಲ್ಲಿ ಸಾಕ್ಷ್ಯಾಧಾರಗಳೊಂದಿಗೆ ನಿರೂಪಿಸಿದ್ದಾರೆ. ನಾಮಪದ, ಕ್ರಿಯಾಪದ ಹಾಗೂ ಸರ್ವನಾಮಗಳ ಮಟ್ಟದಲ್ಲಿ ಒಂದು ಸ್ವರ ಅಥವಾ ವ್ಯಂಜನವು ಹೇಗೆ ಸ್ವತಂತ್ರ ಅರ್ಥಬದ್ಧ ಪದವಾಗಿ ಕಾರ್ಯನಿರ್ವಹಿಸುತ್ತದೆ ಎಂಬುದನ್ನು ಲೇಖನವು ವಿವರಿಸುತ್ತದೆ. ಭಾಷಾ ವೈವಿಧ್ಯತೆಯ ಸಂರಕ್ಷಣೆ ಮತ್ತು ಬಂಜಾರ ಭಾಷೆಯ ವ್ಯಾಕರಣದ ಸಂಕ್ಷಿಪ್ತತೆಯನ್ನು ಅರ್ಥೈಸಿಕೊಳ್ಳುವ ನಿಟ್ಟಿನಲ್ಲಿ ಈ ಅಧ್ಯಯನವು ಮಹತ್ವದ ದಿಕ್ಸೂಚಿಯಾಗಿದೆ.

## KEYWORDS:

ಬಂಜಾರ ಭಾಷೆ, ಪದ ರಚನೆ, ಏಕಾಕ್ಷರ ಪದ, Monosyllabic, ಗೋರ್‌ಬೋಲಿ, ಭಾಷಾ ವಿಜ್ಞಾನ.

ಭಾಷೆ ಎಂಬುದು ಒಂದು ವಿಸ್ಮಯ, ಸಾಮಾಜಿಕ ನಾಗರಿಕ ಮಾನವರ ಮಹಾನ್ವೇಷಣೆ. ಇದು ಮಾನವರ ಕಲ್ಪನೆಯ ಫಲ. ಧ್ವನಿ ಮತ್ತು ಅರ್ಥಗಳನ್ನು ಪರಸ್ಪರ ಸಂಬಂಧಿಸಿದ ವ್ಯವಸ್ಥೆ. ಇವುಗಳು ಸಾಮಾಜಿಕ ಸಂವಹನದ ಪ್ರಮುಖ ಮಾಧ್ಯಮವಾಗಿವೆ. ಸಸುರ್ ಪ್ರಕಾರ ಭಾಷೆ ಒಂದು ಸಂಘಟಿತ ಸಂಕೇತ ವ್ಯವಸ್ಥೆ (Organized symbolic system) ಆಗಿದೆ. ಭಾಷೆಯು ವ್ಯಾಕರಣ ಮತ್ತು ಶಬ್ದಕೋಶವನ್ನು ಒಳಗೊಂಡಿರುವ ಒಂದು ರಚನಾತ್ಮಕ ಸಂವಹನ ವ್ಯವಸ್ಥೆಯಾಗಿದೆ. ಇದು ಮಾನವರು ಮಾತನಾಡುವ ಮತ್ತು ಸಂಕೇತ ರೂಪಗಳೆರಡರಲ್ಲೂ ಅರ್ಥವನ್ನು ತಿಳಿಸುವ ಪ್ರಾಥಮಿಕ ಸಾಧನವಾಗಿದೆ ಮತ್ತು ಬರವಣಿಗೆಯ ಮೂಲಕ ತಿಳಿಸಬಹುದು. ಭಾಷೆ ಮನುಷ್ಯ ಸಮುದಾಯಗಳ ಸಂಘಟನೆಯ ಮೂಲ ಜಾಗವಾಗಿದೆ; ಅವರ ಸಂಸ್ಕೃತಿ, ಗುರುತು ಮತ್ತು ಪರಸ್ಪರ ಸಂವಹನದ ಪ್ರಮುಖ ಸಾಧನವಾಗಿ ಕಾರ್ಯನಿರ್ವಹಿಸುತ್ತದೆ. ಇದು ಕೇವಲ ಧ್ವನಿ ಮತ್ತು ಶಬ್ದಗಳ ಸಮೂಹವಲ್ಲ, ಬದಲಿಗೆ ಸಮಾಜದ ಗುರುತು, ಇತಿಹಾಸ ಮತ್ತು ಭಾವನೆಗಳನ್ನು ಹೊಂದಿಸುವ

ಜೀವಂತ ವ್ಯವಸ್ಥೆ. ಭಾಷಾ ಅಧ್ಯಯನದ ಮುಖ್ಯ ಉದ್ದೇಶ ಈ ವ್ಯವಸ್ಥೆಯ ಧ್ವನಿ ರೂಪ, ವ್ಯಾಕರಣ ಮತ್ತು ಅರ್ಥದ ರಚನೆಯನ್ನು ವಿಶ್ಲೇಷಿಸುವುದಾಗಿದೆ. ಈ ಲೇಖನವು ಭಾಷೆಯ ವೈವಿಧ್ಯತೆ, ಅದರ ವಿಕಾಸ, ಸಾಮಾಜಿಕ ಪಾತ್ರ ಮತ್ತು ಸಮಕಾಲೀನ ಸವಾಲುಗಳನ್ನು ವಿಶ್ಲೇಷಿಸುತ್ತದೆ.

ಭಾರತದಂತಹ ದೇಶದಲ್ಲಿ ನಾಲ್ಕು ನೂರಕ್ಕೂ ಹೆಚ್ಚು ಭಾಷೆಗಳಿವೆ. ಅವುಗಳಲ್ಲಿ ಹಲವು ಅಪಾಯದ ಅಂಚಿನಲ್ಲಿವೆ. ಪ್ರಮುಖವಾಗಿ ಭಾರತದಲ್ಲಿ 197 ಭಾಷೆಗಳು ಅಳಿವಿನ ಅಂಚಿನಲ್ಲಿವೆ. ಅವುಗಳಲ್ಲಿ ಹಲವು ಲಿಪಿ ರಹಿತವಾಗಿವೆ. ಲಿಪಿ ರಹಿತ ಭಾಷೆಗಳು ವಿಶಿಷ್ಟ ಧ್ವನಿ ವ್ಯವಸ್ಥೆ, ವ್ಯಾಕರಣ ರೂಪಗಳನ್ನು ಹೊಂದಿವೆ. ಅವುಗಳ ಅಧ್ಯಯನವು ಭಾಷಾ ವೈವಿಧ್ಯತೆಯನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತದೆ, ಜೊತೆಗೆ ಭಾಷಾ ಕುಟುಂಬಗಳ ನಡುವಿನ ಸಂಬಂಧದ ಅಧ್ಯಯನಕ್ಕೆ ಆಧಾರ ನೀಡುತ್ತವೆ. ಭಾಷೆಯ ರಚನೆಯು ಮುಖ್ಯವಾಗಿ ಮೂರು ಪ್ರಮುಖ ಪ್ರಕಾರಗಳಲ್ಲಿದೆ:

- ಧ್ವನಿಶಾಸ್ತ್ರ (Phonology): ಧ್ವನಿಗಳ ಶ್ರೇಣಿ ಮತ್ತು ಅದರ ಸಮ್ಮಿಶ್ರಣ.
- ರೂಪಶಾಸ್ತ್ರ (Morphology): ಶಬ್ದ ರಚನೆ ಮತ್ತು ಅದರ ರೂಪಾಂತರಗಳು.
- ಸಂಯೋಜನ ಶಾಸ್ತ್ರ (Syntax): ವ್ಯಾಕರಣ ಘಟಕಗಳ ವಿನ್ಯಾಸ ಮತ್ತು ನಿಯಮಗಳು.

ಪ್ರತಿಯೊಂದು ಭಾಷೆಯು ತನ್ನದೇ ಆದ ಪದರಚನಾ ವಿಧಾನಗಳನ್ನು ಹೊಂದಿದ್ದು, ಅದು ಆ ಭಾಷೆಯ ವ್ಯಾಕರಣ ಶೈಲಿ ಹಾಗೂ ಸಂವಹನದ ಸ್ವರೂಪವನ್ನು ನಿರ್ಧರಿಸುತ್ತದೆ. ಪದಗಳು ಅಕ್ಷರಗಳ ಸಮೂಹದಿಂದ ನಿರ್ಮಾಣವಾಗುತ್ತವೆ, ಆದರೆ ಎಲ್ಲಾ ಭಾಷೆಗಳು ಒಂದೇ ರೀತಿಯ ಶೈಲಿಯನ್ನು ಅನುಸರಿಸುವುದಿಲ್ಲ. ಕೆಲವು ಭಾಷೆಗಳು ಏಕಾಕ್ಷರ ಪದಗಳನ್ನು (Monosyllabic words) ಆಧಾರವಾಗಿಟ್ಟುಕೊಂಡಿರುತ್ತವೆ ಮತ್ತು ಕೆಲವು ಭಾಷೆಗಳಲ್ಲಿ ಬಹುಅಕ್ಷರ ಪದಗಳ (Polysyllabic words) ಬಳಕೆ ಇದೆ. ಈ ವ್ಯತ್ಯಾಸವು ಭಾಷೆಯ ಧ್ವನಿ, ವ್ಯಾಕರಣ ಹಾಗೂ ಸಂವಹನದ ಶೈಲಿಯನ್ನು ನಿರ್ಧರಿಸುತ್ತದೆ. ಪದಗಳು ಸಾಮಾನ್ಯವಾಗಿ ಅನೇಕ ಅಕ್ಷರಗಳಿಂದ ಕೂಡಿರುತ್ತವೆ ಎಂಬುದು ಸಾಮಾನ್ಯ ಕಲ್ಪನೆ. ಆದರೆ ಕೆಲವು ಭಾಷೆಗಳು ತಮ್ಮ ಮೂಲ ಪದ ಸಂಪನ್ಮೂಲಗಳನ್ನು ಏಕಾಕ್ಷರದ ಪದಗಳ ಮೇಲೆ ಆಧರಿಸಿಕೊಂಡಿವೆ. ಅಂದರೆ ಈ ವರ್ಗದ ಭಾಷೆಗಳಲ್ಲಿ ಪದ ರಚನೆಯು ಏಕ ಅಕ್ಷರದಿಂದ ಕೂಡಿರುತ್ತದೆ. ಬಹುತೇಕ ಪದಗಳು ಒಂದೇ ಅಕ್ಷರದಿಂದ (ಅಥವಾ ಒಂದು ಧ್ವನಿ) ರೂಪುಗೊಳ್ಳುವ ಭಾಷೆಗಳ ಸಮೂಹವನ್ನು ಏಕಾಕ್ಷರ ಭಾಷೆಗಳು (Monosyllabic word formation) ಎನ್ನಲಾಗುತ್ತದೆ. ಒಂದು ಪದದಲ್ಲಿ ಒಂದು ಅಕ್ಷರ ಇರುತ್ತದೆ. ಈ ಪದಗಳು ಬಹುತೇಕ ಸ್ವತಂತ್ರ ಅರ್ಥವನ್ನು ನೀಡುತ್ತವೆ ಮತ್ತು ಭಾಷೆಯ ಮೂಲ ಘಟಕಗಳಾಗಿರುತ್ತವೆ. ಇಲ್ಲಿ ಪ್ರತಿಯೊಂದು ಪದವು ಒಂದು ಅಕ್ಷರದಿಂದ ಮಾತ್ರ ನಿರ್ಮಾಣವಾಗಿದ್ದು, ಅರ್ಥ ವ್ಯತ್ಯಾಸವನ್ನು ತರುವಲ್ಲಿ ಸ್ವರ

(Tone), ಧ್ವನಿ (Phoneme) ಮತ್ತು ಸಂದರ್ಭ (Context) ಪ್ರಮುಖ ಪಾತ್ರ ವಹಿಸುತ್ತವೆ. ಒಂದೇ ಉಚ್ಚಾರಣೆ ಅಂಶವನ್ನು ಒಳಗೊಂಡು ಒಂದೇ Syllable ರೂಪದಲ್ಲಿ ಇವು ಇರುತ್ತವೆ. ಇದು ಧ್ವನಿ ವ್ಯವಸ್ಥೆಯ ಸರಳತೆ, ವ್ಯಾಕರಣದ ಸಂಕ್ಷಿಪ್ತತೆ ಮತ್ತು ಅರ್ಥ ನಿರ್ಮಾಣದ ಸ್ವತಂತ್ರತೆಯನ್ನು ಪ್ರತಿಬಿಂಬಿಸುತ್ತದೆ.

ಪ್ರಪಂಚದಲ್ಲಿ ಈ ಭಾಷಾ ವರ್ಗಕ್ಕೆ ಸೇರಿದ ಭಾಷೆಗಳೆಂದರೆ ಹಳೆಯ ಚೈನೀಸ್ (Old Chinese), ವಿಯೆಟ್ನಾಮಿ (Vietnamese), ಬರ್ಮಿಸ್ (Burmese), ಥೈ (Thai) ಮತ್ತು ಸಂಬಂಧಿತ ಟೈ–ಕಟೈ ಭಾಷೆಗಳು, ಸುಮೇರಿಯನ್ (Sumerian), ಟಿಬೆಟೋ ಆಸ್ಟ್ರೋ–ಏಷ್ಯಾಟಿಕ್, ಟಿಬೆಟಿಯನ್. ಈ ಭಾಷೆಗಳ ಬಹುಪಾಲು ಪದಗಳು ಒಂದೇ ಧ್ವನಿಯಿಂದ ಅಥವಾ ಅಕ್ಷರದಿಂದ ನಿರ್ಮಿತವಾಗಿವೆ.

ಆದರೆ ಭಾರತ ಸೇರಿದಂತೆ ಜಗತ್ತಿನಾದ್ಯಂತ ಇರುವ ಬಂಜಾರ ಸಮುದಾಯದವರು ಮಾತನಾಡುವ ಭಾಷೆಯಾದ ಬಂಜಾರ ಭಾಷೆಯಲ್ಲೂ ಏಕಾಕ್ಷರ (Monosyllabic) ಪದ ರಚನೆ ಹೊಂದಿರುವುದು ಕಂಡುಬರುತ್ತದೆ.

**ಏಕಾಕ್ಷರ (Monosyllabic) ಭಾಷೆಗಳ ಪ್ರಮುಖ ಲಕ್ಷಣಗಳು:**

- ಪದಗಳು ಒಂದೇ ಸಿಲಬಲ್ (Syllable) ಒಳಗೊಂಡಿರುತ್ತವೆ.
- ಪದಗಳಲ್ಲಿ ಸಾಮಾನ್ಯವಾಗಿ Suffix ಮತ್ತು Prefixes ಇರುವುದಿಲ್ಲ.
- ಪದಗಳು ಚಿಕ್ಕದಾಗಿರುತ್ತವೆ.
- ಸಾಮಾನ್ಯವಾಗಿ Consonant + Vowel ಅಥವಾ (Vowel) ಆಗಿರಬಹುದು.
- ಏಕಾಕ್ಷರ ಪದಗಳಲ್ಲಿ ಧ್ವನೌಷ್ಠ (Tones) ಅಥವಾ Pitch variations ಇರುತ್ತದೆ.
- ಸ್ವರ (Tones) ಅರ್ಥ ಬದಲಾವಣೆಗೆ ಪ್ರಮುಖ ಪಾತ್ರ ವಹಿಸುತ್ತದೆ.
- ಧ್ವನಿ ತಂತ್ರದ ಸೂಕ್ಷ್ಮತೆ, ಸ್ವರದ ವೈವಿಧ್ಯತೆ ಹಾಗೂ ಸಂದರ್ಭದ ಮಹತ್ವವನ್ನು ತೋರಿಸುತ್ತವೆ.

ಬಂಜಾರ ಭಾಷೆ ಬಂಜಾರಿ (ಲಂಬಾಣಿ, ಗೋರ್‌ಬೋಲಿ) ಭಾರತ ಮತ್ತು ಇತರ ಪ್ರದೇಶಗಳ ಬುಡಕಟ್ಟು ಜನಾಂಗಗಳ ನಡುವೆ ಪ್ರಮುಖವಾಗಿ ಬಳಕೆಯಾಗುವ ಭಾಷೆ. ಈ ಭಾಷೆಗೆ ಯಾವುದೇ ಲಿಪಿ ಇಲ್ಲ. ಜಾನಪದ ಸಾಂಸ್ಕೃತಿಕ ಆಚರಣೆ, ವೇಷಭೂಷಣ, ಪೂಜೆ ಇತ್ಯಾದಿ ಶ್ರೀಮಂತವಾಗಿರುವ ಈ ಜನಾಂಗದವರು ಆಡುವ ಭಾಷೆಯನ್ನು ಗೋರ್ ಬೋಲಿ ಅಥವಾ ಬಂಜಾರ ಭಾಷೆ ಎನ್ನಲಾಗುತ್ತದೆ. ಈ ಭಾಷೆಯು ಹಲವು ಪ್ರಮುಖ ಅಂಶಗಳನ್ನು ಒಳಗೊಂಡಿದೆ. ಈ ಭಾಷೆಯ ರಚನಾತ್ಮಕ ಅಧ್ಯಯನ ಈ ಲೇಖನದ ಮುಖ್ಯ ಉದ್ದೇಶವಾಗಿದೆ. ಬಂಜಾರ ಭಾಷೆಯು ಏಕಾಕ್ಷರ ರಚನೆಯನ್ನು ಒಳಗೊಂಡಿರುವ ಕೆಲವು ಉದಾಹರಣೆಗಳನ್ನು ಈ ಕೆಳಗಿನಂತೆ ನೋಡಬಹುದಾಗಿದೆ:

**ಉದಾಹರಣೆ:**

ಕ = ಹೇಳು

ಕಾಂ = ಕೆಲಸ

ಉ = ಅದು

ಛ = ಇದೆ

ಜು = ಹೇನು

ಜೋ = ಹೋಗು

ದ = ಕೊಡು

ಘೀ = ತುಪ್ಪ ಇತ್ಯಾದಿ.

ಮೇಲಿನ ಪದಗಳನ್ನು ಗಮನಿಸಿದರೆ ಬಂಜಾರ ಭಾಷೆಯಲ್ಲಿ ಏಕಾಕ್ಷರದಿಂದ ಕೂಡಿರುವ ಪದಗಳು ನಾಮಪದ ಮತ್ತು ಕ್ರಿಯಾಪದಗಳೆರಡೂ ಆಗಿರುವುದು ಕಂಡುಬರುತ್ತದೆ.

**ನಾಮಪದಗಳಿಗೆ ಉದಾಹರಣೆಗಳು:**

ಘೀ = ತುಪ್ಪ

ಜು = ಹೇನು

**ಏಕಾಕ್ಷರದ ಕ್ರಿಯಾಪದಗಳಿಗೆ ಉದಾಹರಣೆಗಳು:**

ಕ = ಹೇಳು

ಕಾಂ = ಕೆಲಸ

ಜೋ = ಹೋಗು

ದ = ಕೊಡು

ಧ್ವನಿ ವ್ಯವಹಾರ (Phonological constructs) ಅಥವಾ ಧ್ವನಿಗಳ ಬಳಕೆ ಸರಳವಾಗಿರುತ್ತದೆ. ಅದರ ಪರಿಣಾಮವಾಗಿ ಪದಗಳು ಏಕಾಕ್ಷರವಾಗುವ ಸಾಧ್ಯತೆ ಹೆಚ್ಚು. ಸ್ವರ–ವ್ಯಂಜನಗಳ ರೂಪವು ಹೆಚ್ಚಾಗಿ ದೊರಕುವುದು. ಬಂಜಾರ ಭಾಷೆಯಲ್ಲಿ ಒಂದು ಸ್ವರವೇ ಪದದ ಪಾತ್ರವನ್ನು, ಅಂದರೆ ಅರ್ಥಬದ್ಧ ಪಾತ್ರವನ್ನು ನಿರ್ವಹಿಸುವುದು ಕಂಡುಬರುತ್ತದೆ. ಏಕಸ್ವರದ ಅರ್ಥಬದ್ಧ ಪದವನ್ನು ಈ ಕೆಳಗಿನಂತೆ ನೋಡಬಹುದು:

**ಉದಾಹರಣೆ:**

ಇ = ಇದು

ಉ = ಅದು

ಒ = ಅವರು ಇತ್ಯಾದಿ.

ಈ ಭಾಷೆಯಲ್ಲಿ ಒಂದು ವ್ಯಂಜನಾಕ್ಷರವೂ ಅರ್ಥಬದ್ಧವಾದ ಪದವಾಗಿ ಕಂಡುಬರುತ್ತದೆ. ಅದಕ್ಕೆ ಉದಾಹರಣೆಗಳು:

ಕ = ಹೇಳು

ಛ = ಇದೆ

ದ = ಕೊಡು
ರ = ಇರು
ಲ = ತೆಗೆದುಕೋ
ಮ = ನಾನು

ಸ್ವರಾಕ್ಷರಗಳಿಗೆ ಅನುಸ್ವರ ಕೂಡಿಕೊಂಡು ಅರ್ಥಪೂರ್ಣವಾದ ಪದ ರಚನೆಯಾಗುವುದು ಸಹ ಈ ಭಾಷೆಯಲ್ಲಿ ಕಂಡುಬರುತ್ತದೆ.

**ಉದಾಹರಣೆ:**

ಈಂ = ಈ ಕಡೆ
ಏಂ = ಇದರಲ್ಲಿ
ಓಂ = ಅದರಲ್ಲಿ

ಹಾಗೆಯೇ ವ್ಯಂಜನಗಳಿಗೆ ಅನುಸ್ವರ ಕೂಡಿ ಅರ್ಥಬದ್ಧವಾದ ಪದ ರಚನೆಯಾಗುವುದಕ್ಕೆ ಉದಾಹರಣೆಗಳು:

ಕಂ = ಸ್ವಲ್ಪ
ಗಂ = ಬೆವರು
ತಂ = ನೀವು
ಥಂ = ತೊಲೆ / ನಿಲ್ಲು
ದಂ = ಕ್ಷಣ (One moment)
ರಂ = ಆಟ ಆಡು
ಹಂ = ನಾವು, ಇತ್ಯಾದಿ.

ಕೆಲವು ಪದಗಳು ವ್ಯಂಜನ, ಸ್ವರ ಮತ್ತು ಅನುಸ್ವರಗಳು ಕೂಡಿ ಅರ್ಥವತ್ತಾದ ರಚನೆ ಹೊಂದಿರುವುದು ಕಂಡುಬರುತ್ತದೆ.

**ಉದಾಹರಣೆ:**

ಕಾಂ = ಕೆಲಸ
ಕಿಂ = ಎಲ್ಲಿಗೆ ಅಥವಾ ಯಾವ ಕಡೆಗೆ
ಕೇಂ = ಯಾವುದರಲ್ಲಿ
ಗಾಂ = ಊರು
ಥಾಂ = ನಿಲ್ಲಿಸು
ದಾಂ = ಬೆಲೆ / ದರ
ದೇಂ = ಕೊಡುವುದರಲ್ಲಿ
ಲೀಂ = ಬೇವು
ಸೇಂ = ಎಲ್ಲಾದರಲ್ಲೂ ಇತ್ಯಾದಿ.

**ಸ್ವರಾಕ್ಷರಕ್ಕೆ ಸ್ವರ ಕೂಡಿ ಆಗುವ ಅರ್ಥಪೂರ್ಣ ಪದಗಳಿಗೆ ಉದಾಹರಣೆಗಳು:**

ಆ್ಯ = ಬಂದಳು
ಏ್ಯ = ಇವಳು ಅಥವಾ ಇವನು
ಓ್ಯ = ಅವಳು ಅಥವಾ ಅವನು

ವ್ಯಂಜನಾಕ್ಷರಗಳ ಜೊತೆ ಒಂದು ಅಥವಾ ಎರಡು ಸ್ವರಗಳು ಸೇರಿ ಒಂದು ಅರ್ಥಪೂರ್ಣ ಪದವಿರುವುದು ಸಹ ಬಂಜಾರ ಭಾಷೆಯಲ್ಲಿ ಕಂಡುಬರುತ್ತದೆ.

**ಉದಾಹರಣೆ:**

ಕೀ = ಹೇಳಿದಳು
ಕೆ = ಹೇಳಿದರು
ಕಾಯಿ = ಏನು
ಕೋಯಿ = ಯಾರೋ
ಖಾಯಿ = ಕಂದಕ
ಗೋಯಿ = ಹಲ್ಲಿ (ಉಡ)
ಛಾಯಿ = ಬಂಗು (ನೆರಳು)
ಲೋ = ತೆಗೆದುಕೊಳ್ಳಿರಿ ಇತ್ಯಾದಿ.

ಬಂಜಾರ ಭಾಷೆಯಲ್ಲಿ ಬಳಕೆಯಲ್ಲಿರುವ ಈ ಬಗೆಯ ಏಕಾಕ್ಷರ ಪದರಚನೆಗಳು ಬಹುತೇಕ ಸ್ವತಂತ್ರ ಅರ್ಥವನ್ನು ನೀಡುತ್ತವೆ ಮತ್ತು ಭಾಷೆಯ ಮೂಲ ಘಟಕಗಳಾಗಿವೆ. ಭಾಷೆಯ ಬಳಕೆ ಅದರ ಭಾಷಿಕ ಸಮುದಾಯದ ಸಾಮಾಜಿಕ ಗುರುತನ್ನು ಬಲಪಡಿಸುತ್ತದೆ ಮತ್ತು ಸಂಸ್ಕೃತಿ ಸಂವಹನಕ್ಕೆ ಸೇತುವೆ ಸಾಧಿಸುತ್ತದೆ. ಭಾಷೆ ಕೇವಲ ಭಾಷಾ ತಾತ್ವಿಕ ವ್ಯವಸ್ಥೆಯಾಗದೆಯೇ ಅದು ಸಮಾಜದ ಪ್ರತಿಬಿಂಬ, ಗುರುತು ಮತ್ತು ಶಕ್ತಿಯ ಸಾಧನವೂ ಆಗಿದೆ. ಮುಖ್ಯವಾಗಿ ಈ ಲೇಖನವು ಬಂಜಾರ ಭಾಷೆಯ ಪದ ರಚನೆಗಳನ್ನು ವರ್ಣನಾತ್ಮಕ ಅಧ್ಯಯನಕ್ಕೆ ಒಳಪಡಿಸುವುದು ಮತ್ತು ಭಾರತೀಯ ಭಾಷಿಕ ಸಂದರ್ಭದಲ್ಲಿ ಕಂಡುಬರುವ ಸಾಮ್ಯ ಮತ್ತು ವೈರುಧ್ಯಗಳನ್ನು ಸ್ಪಷ್ಟಪಡಿಸುವ ಉದ್ದೇಶ ಹೊಂದಿದೆ.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.